# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 371

ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 11.12.2024

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದಲ್ಲಿ KSRTC, BMTC ಸೇರಿದಂತೆ ನಾಲ್ಕು ನಿಗಮಗಳ ನೌಕರರಿಗೆ ಬಿಡುಗಡೆ ಮಾಡಬೇಕಿರುವ ಬಾಕಿ ಮೊತ್ತ ಎಷ್ಟು ಎಂದಿನಿಂದ ಬಾಕಿ ಇದೆ; ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು; ಈವರೆವಿಗೂ ಬಾಕಿ ಹಣ ಬಿಡುಗಡೆ ಮಾಡದಿರುವುದಕ್ಕೆ ಕಾರಣಗಳೇನು; (ವಿವರ ನೀಡುವುದು)</td><td>ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ 2023-24ನೇ ಸಾಲಿನ ಪೂರ್ವದ ಆರ್ಥಿಕ ವರ್ಷಗಳಲ್ಲಿ ಅಗಾಧವಾದ ಸಾಲದ ಹೊರೆಯಿತ್ತು ಹಾಗೂ ಸಾರಿಗೆ ನಿಗಮಗಳು ಇಂಧನ ಕಂಪನಿಗಳಿಗೆ ಇಂಧನದ ವೆಚ್ಚವನ್ನು, ಭವಿಷ್ಯ ನಿಧಿ ನ್ಯಾಸ ಮಂಡಳಿಗೆ ಬಾಕಿ ಮೊತ್ತ, ನಿವೃತ್ತ ನೌಕರರಿಗೆ ಉಪಧನ, ಬ್ಯಾಂಕ್ ಸಾಲ ಮತ್ತು ಸರಬರಾಜುದಾರರ/ಇತರೆ ಬಿಲ್ಲುಗಳನ್ನು ಪಾವತಿಸದೇ ಬಾಕಿಯಿರಿಸಿದ್ದರಿಂದ ನಿಗಮಗಳ ಮೇಲೆ ಆರ್ಥಿಕ ಹೊರೆ ಹೆಚ್ಚಾಗಿತ್ತು. ಹಾಗಾಗಿ, ಹೊಸ ಬಸ್ಸುಗಳನ್ನು ಖರೀದಿಸಲು ಮತ್ತು ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳಲು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢಿಕರಿಸಿ ಕೊಳ್ಳಬೇಕಾಗಿತ್ತು.
<table>
<tr><th>ವಿವರ</th><th>ಮಾರ್ಚ್-2023ರ ಅಂತ್ಯಕ್ಕೆ</th><th>ಏಪ್ರಿಲ್-2023ರಿಂದ ನವೆಂಬರ್-2024ರವರೆಗೆ</th><th>ನವೆಂಬರ್-2024ರ ಅಂತ್ಯಕ್ಕೆ</th></tr>
<tr><td>ಭವಿಷ್ಯ ನಿಧಿ</td><td>1230.36</td><td>1764.10</td><td>2994.46</td></tr>
<tr><td>ನಿವೃತ್ತ ನೌಕರರ ಬಾಕಿ</td><td>549.15</td><td>76.25</td><td>625.40</td></tr>
<tr><td>ಹಾಲಿ ಸಿಬ್ಬಂದಿಗಳ ಬಾಕಿ</td><td>385.96</td><td>-71.15</td><td>314.81</td></tr>
<tr><td>ಇಂಧನ ಸರಬರಾಜುದಾರರಿಗೆ ಬಾಕಿ</td><td>111.02</td><td>740.05</td><td>851.07</td></tr>
<tr><td>ಸರಬರಾಜುದಾರರ ಮತ್ತು ಇತರೆ ಬಾಕಿ</td><td>769.83</td><td>113.30</td><td>883.13</td></tr>
<tr><td>ಸಾಲದ ಹೊಣೆಗಾರಿಕೆ</td><td>1053.06</td><td>-253.59</td><td>799.47</td></tr>
<tr><td>ಒಟ್ಟು</td><td>4099.38</td><td>2368.96</td><td>6468.34</td></tr>
</table>
</td></tr>
</table>

| | | |
|---|---|---|
| | | 2023-24ನೇ ಸಾಲಿನ ಪೂರ್ವದ ಆರ್ಥಿಕ ವರ್ಷಗಳಲ್ಲಿ 2020ರ ವೇತನ ಪರಿಷ್ಕರಣೆಯನ್ನು ಮಾರ್ಚ್-2023ಕ್ಕೆ ಅನುಷ್ಠಾನಗೊಳಿಸಿದ್ದು, ಸದರಿ ಪರಿಷ್ಕರಣೆಯ ಹಿಂಬಾಕಿಯನ್ನು ಬಾಕಿ ಉಳಿಸಿಕೊಂಡಿರುತ್ತದೆ.<br><br>ಅಲ್ಲದೇ, ರಾಜ್ಯ ರಸ್ತೆ ಸಾರಿಗೆ ನಿಗಮಗಳು ರಸ್ತೆ ಸಾರಿಗೆ ನಿಗಮಗಳ ಕಾಯ್ದೆ-1950 (The Road Transport Corporation Act, 1950) ರಡಿ ಅಸ್ತಿತ್ವಕ್ಕೆ ಬಂದಿರುವ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆ ಆಗಿರುತ್ತದೆ. ರಸ್ತೆ ಸಾರಿಗೆ ನಿಗಮಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ವೇತನ ಹಾಗೂ ಎಲ್ಲಾ ಆರ್ಥಿಕ ಸೌಲಭ್ಯಗಳನ್ನು ನಿಗಮಗಳು ತನ್ನ ಆಂತರಿಕ ಮೂಲಗಳಿಂದಲೇ ಭರಿಸಬೇಕಾಗಿರುತ್ತದೆ.<br><br>ಪ್ರಸ್ತುತ ರಾಜ್ಯದ ನಾಲ್ಕು ರಸ್ತೆ ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ನೌಕರರಿಗೆ ಪಾವತಿಸುವ ಬಾಕಿ ಹೊಣೆಗಾರಿಕೆ ವಿವರ ಈ ಕೆಳಕಂಡಂತಿದೆ:<br><br>**(ರೂ.ಕೋಟಿಗಳಲ್ಲಿ)** |

| **ನಿಗಮ/ ಸಂಸ್ಥೆ** | ಮಾರ್ಚ್-2023ರ ಅಂತ್ಯಕ್ಕೆ | ನವೆಂಬರ್-2024ರ ಅಂತ್ಯಕ್ಕೆ |
|---|---|---|
| ಕ.ರಾ.ರ.ಸಾ.ನಿಗಮ | 163.63 | 172.67 |
| ಬೆಂ.ಮ.ಸಾ.ಸಂಸ್ಥೆ | 235.91 | 434.02 |
| ವಾ.ಕ.ರ.ಸಾ.ಸಂಸ್ಥೆ | 413.20 | 182.65 |
| ಕ.ಕ.ರ.ಸಾ.ನಿಗಮ | 122.37 | 134.98 |
| **ಒಟ್ಟು** | **935.11** | **924.32** |

<table>
<tr>
<td>ಆ.</td>
<td>ನಿವೃತ್ತ ನೌಕರರಿಗೆ ಬಿಡುಗಡೆ ಮಾಡಬೇಕಿರುವ ಗ್ರಾಚ್ಯುಟಿ ಮೊತ್ತ ಎಷ್ಟು; ಯಾವಾಗ ಬಿಡುಗಡೆ ಮಾಡಲಾಗುವುದು; (ಸಂಸ್ಥೆವಾರು ಮಾಹಿತಿ ನೀಡುವುದು)</td>
<td>ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳ ನಿವೃತ್ತ ನೌಕರರಿಗೆ ಬಿಡುಗಡೆ ಮಾಡಬೇಕಾಗಿರುವ ಗ್ರಾಚ್ಯುಟಿ ಮೊತ್ತ ಕೆಳಕಂಡಂತಿದೆ:<br><br>
(ರೂ.ಕೋಟಿಗಳಲ್ಲಿ)
<table>
<tr><th>ಸಂಸ್ಥೆ</th><th>ಮಾರ್ಚ್-2023ರ ಅಂತ್ಯಕ್ಕೆ</th><th>ನವೆಂಬರ್-2024ರ ಅಂತ್ಯಕ್ಕೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>31.01</td><td>36.00</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>103.00</td><td>133.69</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>180.00</td><td>78.59</td></tr>
<tr><td>ಕ.ಕ.ರ.ಸಾ.ನಿಗಮ</td><td>11.00</td><td>47.80</td></tr>
<tr><td>ಒಟ್ಟು</td><td>325.01</td><td>296.08</td></tr>
</table>
<br>
ಮುಂದಿನ ದಿನಗಳಲ್ಲಿ ನಿಗಮಗಳ ಆರ್ಥಿಕ ಸಾಮರ್ಥ್ಯಕ್ಕನುಗುಣವಾಗಿ ಸಾರಿಗೆ ನಿಗಮಗಳ ನೌಕರರಿಗೆ ಪಾವತಿಸಬೇಕಿರುವ ಬಾಕಿ ಮೊತ್ತ ಹಾಗೂ ನಿವೃತ್ತ ನೌಕರರಿಗೆ ಬಿಡುಗಡೆ ಮಾಡಬೇಕಿರುವ ಗ್ರಾಚ್ಯುಟಿ ಪಾವತಿಸಲು ಕ್ರಮ ವಹಿಸಲಾಗುವುದು.<br><br>
ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ದಿನಾಂಕ:01.01.2020 ರಿಂದ 28.02.2023ರ ಅವಧಿಯಲ್ಲಿ ಸೇವಾವಿಮುಕ್ತಿ ಹೊಂದಿದ ಅಧಿಕಾರಿ ಮತ್ತು ನೌಕರರಿಗೆ ಪಾವತಿಸಬೇಕಾದ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಉಪಧನ ಹಾಗೂ ಗಳಿಕೆ ರಜೆ ನಗದೀಕರಣದ ವ್ಯತ್ಯಾಸದ ಮರುಪಾವತಿಗಾಗಿ ರೂ.224.05 ಕೋಟಿಗಳ ವಿಶೇಷ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.</td>
</tr>
<tr>
<td>ಇ.</td>
<td>ಸೇವಾವಧಿಯಲ್ಲಿ ಮೃತಪಟ್ಟ ಸಿಬ್ಬಂದಿ ಕುಟುಂಬದ ಅವಲಂಬಿತರಿಗೆ ನೀಡುತ್ತಿರುವ ಪರಿಹಾರ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಪರಿಹಾರ ಮೊತ್ತ ಎಷ್ಟು ಮತ್ತು ಎಂದಿನಿಂದ ಜಾರಿಗೆ ಬರಲಿದೆ; (ಸಂಪೂರ್ಣ ಮಾಹಿತಿ ನೀಡುವುದು)</td>
<td>ಕ.ರಾ.ರ.ಸಾ.ನಿಗಮ:<br><br>
ನಿಗಮದ ಮೃತ ನೌಕರರ ಅವಲಂಬಿತರಿಗೆ ರೂ.3.00 ಲಕ್ಷಗಳ ಪರಿಹಾರ ಮೊತ್ತವನ್ನು ನೀಡುವ ನೌಕರರ ಕುಟುಂಬ ಕಲ್ಯಾಣ ಯೋಜನೆಯನ್ನು 2008ನೇ ಸಾಲಿನಿಂದ ಜಾರಿಗೆ ತರಲಾಗಿದ್ದು, ಪರಿಹಾರ ಮೊತ್ತವನ್ನು ರೂ. 03.00 ಲಕ್ಷಗಳಿಂದ ರೂ. 10.00 ಲಕ್ಷಗಳಿಗೆ ದಿನಾಂಕ:01.11.2023 ರಿಂದ ಜಾರಿಗೆ ಬರುವಂತೆ ಹೆಚ್ಚಿಸಲಾಗಿದೆ.<br><br>
SBI ಅಪಘಾತ ವಿಮಾ ಯೋಜನೆ ಮತ್ತು ಕರಾಸಾ ನೌಕರರ ಕುಟುಂಬ ಕಲ್ಯಾಣ ಅಪಘಾತ ಪರಿಹಾರ ಯೋಜನೆಯಡಿ (ಕರ್ತವ್ಯ ನಿರತ ಮತ್ತು ಖಾಸಗೀ</td>
</tr>
</table>

| | | |
|---|---|---|
| | | ಅಪಘಾತ ಸೇರಿದಂತೆ) ರೂ.1.00 ಕೋಟಿಗಳನ್ನು ನೀಡಲಾಗುತ್ತದ್ದು, ಇಲ್ಲಿಯವರೆಗೆ 22 ಪ್ರಕರಣಗಳಲ್ಲಿ ರೂ.22.00 ಕೋಟಿ ಪರಿಹಾರ ನೀಡಲಾಗಿದೆ.<br><br>ಮುಂದುವರೆದು, ಪ್ರಸ್ತುತ ಅವಲಂಬಿತರಿಗೆ ನೀಡುತ್ತಿರುವ ಪರಿಹಾರ ಮೊತ್ತವನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆ ನಿಗಮದ ಮುಂದೆ ಇರುವುದಿಲ್ಲ.<br><br>**ಬೆಂ.ಮ.ಸಾ.ಸಂಸ್ಥೆ:**<br>ಸಂಸ್ಥೆಯಲ್ಲಿ ಸೇವಾವಧಿಯಲ್ಲಿ ಮೃತಪಟ್ಟ ಸಿಬ್ಬಂದಿ ಕುಟುಂಬದ ಅವಲಂಭಿತರಿಗೆ ನೀಡುತ್ತಿರುವ ಪರಿಹಾರ ಮೊತ್ತವನ್ನು ದಿನಾಂಕ:19/02/2024 ರಿಂದ ಜಾರಿಗೆ ಬರುವಂತೆ ಇಲಾಖಾ ಗುಂಪು ವಿಮಾ ಯೋಜನೆಯನ್ನು ಪರಿಷ್ಕರಿಸಿ ಅಪಘಾತದಿಂದ ಮೃತರಾದ ನೌಕರರ ಕುಟುಂಬದ ಅವಲಂಭಿತರಿಗೆ ರೂ.50.00 ಲಕ್ಷಗಳನ್ನು ಮತ್ತು ಸ್ವಾಭಾವಿಕವಾಗಿ ಮರಣಹೊಂದಿದ ನೌಕರರ ಕುಟುಂಬದ ಅವಲಂಭಿತರಿಗೆ ರೂ.10.00 ಲಕ್ಷಗಳನ್ನು ವಿತರಿಸುವ ಕುರಿತು ಆದೇಶಿಸಲಾಗಿರುತ್ತದೆ. ಮುಂದುವರೆದಂತೆ ಕೆನರಾ ಬ್ಯಾಂಕ್, ಎಸ್.ಬಿ.ಐ ಮತ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾಗಳಲ್ಲಿ ವೇತನ ಖಾತೆಹೊಂದಿರುವ ನೌಕರರು ಅಪಘಾತದಿಂದ ಮೃತರಾದ ನೌಕರರ ಕುಟುಂಬದ ಅವಲಂಭಿತರಿಗೆ ರೂ.64.00 ಲಕ್ಷಗಳಿಂದ ರೂ.1.00 ಕೋಟಿವರೆಗೆ ವೈಯುಕ್ತಿಕ ವಿಮಾ ಪರಿಹಾರ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್ಗಳೊಂದಿಗೆ ಹೊಂದಿರುವ ಒಡಂಬಡಿಕೆಯ ಅನುಗುಣವಾಗಿ ಬ್ಯಾಂಕ್‌ಗಳ ಮುಖಾಂತರ ವಿತರಿಸಲಾಗುತ್ತಿದೆ ಮತ್ತು ಸ್ವಾಭಾವಿಕವಾಗಿ ಮರಣಹೊಂದಿದ ನೌಕರರ ಕುಟುಂಬದ ಅವಲಂಭಿತರಿಗೆ ಮೃತ ನೌಕರರು ಹೊಂದಿದ್ದ ಡೆಬಿಟ್ ಕಾರ್ಡ್ ಅನುಗುಣವಾಗಿ ಪರಿಹಾರ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್‌ಗಳ ಮುಖಾಂತರ ವಿತರಿಸಲಾಗುತ್ತಿದೆ.<br><br>**ವಾ.ಕ.ರ.ಸಾ.ಸಂಸ್ಥೆ**<br><br>ವಾ.ಕ.ರ.ಸಾರಿಗೆ ಸಂಸ್ಥೆಯಲ್ಲಿ ನೌಕರರ ಕುಟುಂಬ ಕಲ್ಯಾಣ ನಿಧಿ ಯೋಜನೆಯನ್ನು ಪ್ರಾರಂಭಿಸಲಾಗಿದೆ ಈ ಯೋಜನೆಯಡಿ ನೌಕರರಿಂದ ಪ್ರತಿ ತಿಂಗಳು ತಲಾ ರೂ. 300/- ಯಂತೆ ಮತ್ತು ಅದಕ್ಕೆ ಆಡಳಿತ ಪರ ವಂತಿಗೆ ತಲಾ ರೂ. 100/- ರಂತೆ ವಂತಿಗೆ ಸಂಗ್ರಹಿಸಲಾಗುತ್ತಿದ್ದು, ಕ್ರೂಡೀಕೃತ ಮೊತ್ತದ ಸಹಾಯದಿಂದ ಸೇವಾವಧಿಯಲ್ಲಿ ನಿಧನರಾಗುವ ನೌಕರರ ಅವಲಂಬಿತರಿಗೆ ತಲಾ ರೂ.5.00 ಲಕ್ಷ ಮೊತ್ತದ ಪರಿಹಾರ ನೀಡಲಾಗುತ್ತಿದೆ. ಈ |

| | | |
|---|---|---|
| | | ಯೋಜನೆಯನ್ನು ದಿನಾಂಕ:15-02-2024 ರಿಂದ ಜಾರಿಗೊಳಿಸಲಾಗಿದ್ದು ಇದುವರೆಗೂ 42 ಜನ ನೌಕರರ ಪ್ರಕರಣಗಳಲ್ಲಿ ರೂ.2,09,81,400/- ಮೊತ್ತವನ್ನುಪರಿಹಾರವಾಗಿ ನೀಡಲಾಗಿದೆ.<br><br>ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಹಯೋಗದೊಂದಿಗೆ ಪ್ರೀಮಿಯಂ ರಹಿತ ವೈಯಕ್ತಿಕ ಅಪಘಾತ ವಿಮಾ ಯೋಜನೆಯನ್ನು ನವೆಂಬರ್-2022 ರಿಂದ ಜಾರಿಗೊಳಿಸಲಾಗಿದ್ದು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗಳಲ್ಲಿ ನೌಕರರು ವೇತನ ಖಾತೆ ಹೊಂದಿ ನಿರಂತರವಾಗಿ ಅವರ ವೇತನವು ಅಲ್ಲಿ ಜಮೆ ಆಗುತ್ತಿದ್ದರೆ ಅಂತಹ ನೌಕರರು ಕರ್ತವ್ಯದ ಮೇಲೆ ಅಥವಾ ಕರ್ತವ್ಯ ಇಲ್ಲದೇ ಇದ್ದಾಗ ಅಪಘಾಕೀಡಾಗಿ ನಿಧನರಾದ ಸಂದರ್ಭದಲ್ಲಿ ಅಂತಹ ನೌಕರರ ಅವಲಂಬಿತರಿಗೆ ತಲಾ ರೂ. 50,00,000/- ಮೊತ್ತದ ಪರಿಹಾರ ನೀಡಲಾಗುತ್ತದೆ. ಇದುವರೆಗೂ ಈ ಯೋಜನೆಯಡಿ 04 ಜನ ನೌಕರರ ಅಪಘಾತ ಪ್ರಕರಣಗಳಲ್ಲಿ ತಲಾ ರೂ.50.00 ಲಕ್ಷದಂತೆ ಹಾಗೂ 01-ಅಂಗಹೀನರಾದ ನೌಕರರ ಪ್ರಕರಣದಲ್ಲಿ ರೂ.16.00 ಲಕ್ಷ ಮೊತ್ತ ಪರಿಹಾರ ನೀಡಲಾಗಿದೆ.<br><br>ಇದೇ ಮಾದರಿಯಲ್ಲಿ ಕೆನರಾ ಬ್ಯಾಂಕ್ ಸಹಯೋಗದೊದಿಗೆ ವೇತನ ಖಾತೆಯನ್ನು ಹೊಂದಿದ ನೌಕರರಿಗೆ ಪ್ರೀಮಿಯಂ ರಹಿತ ವೈಯಕ್ತಿಕ ಅಪಘಾತ ವಿಮಾ ಯೋಜನೆಯನ್ನು ಜಾರಿಗೊಳಿಸಲಾಗಿದ್ದು, ಈ ಯೋಜನೆಯಡಿ ಅಪಘಾತಗಳಲ್ಲಿ ನಿಧನರಾದವರಿಗೆ ಅವರ ವೇತನವನ್ನು ಮಾನದಂಡವನ್ನಾಗಿಸಿಕೊಂಡು ಗರಿಷ್ಠ ರೂ.1.00 ಕೋಟಿ ಮೊತ್ತದ ಪರಿಹಾರ ನೀಡುವ ಯೋಜನೆಯನ್ನು ದಿನಾಂಕ:14.11.2024 ರಿಂದ ಜಾರಿಗೊಳಿಸಲಾಗಿದೆ.<br><br>ಮುಂದುವರಿದು ಅಪಘಾತಗಳಲ್ಲಿ ನಿಧನರಾದ ನೌಕರರ ಪ್ರಕರಣಗಳಲ್ಲಿ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ-1923ರಡಿ ನಿಗದಿತ ಪರಿಹಾರ ನೀಡಲಾಗುವ ಪದ್ಧತಿ ಜಾರಿಯಲ್ಲಿದೆ.<br><br>**ಕ.ಕ.ರ.ಸಾ.ನಿಗಮ**<br><br>ನಿಗಮದಲ್ಲಿ ಸೇವಾ ಅವಧಿಯಲ್ಲಿ ಮೃತಪಟ್ಟ ಸಿಬ್ಬಂದಿ ಕಟುಂಬದ ಅವಲಂಬಿತರಿಗೆ ಕಾರ್ಮಿಕ ಕಲ್ಯಾಣ ಇಲಾಖೆಯ ವತಿಯಿಂದ ಆಂತರಿಕ ಗುಂಪು ವಿಮಾ ಯೋಜನೆ ಅಡಿ ರೂ.10.00ಲಕ್ಷಗಳ ಪರಿಹಾರ ಮೊತ್ತವನ್ನು ವಿತರಿಸಲಾಗುತ್ತಿದೆ. |

| | | |
|---|---|---|
| | | ಡಿಸೆಂಬರ್-2023ರಿಂದ ಯೂನಿಯನ್ ಬ್ಯಾಂಕ್ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದು ಮೃತಾವಲಂಬಿತರಿಗೆ ರೂ.1.00 ಕೋಟಿ ಪರಿಹಾರ ನೀಡಲಾಗುತ್ತದೆ.<br><br>ಪ್ರಸ್ತುತ ಸದರಿ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಇರುವುದಿಲ್ಲ. |
| ಈ. | ಅನಾರೋಗ್ಯಕ್ಕಿಡಾಗುವ ಸಿಬ್ಬಂದಿ ಮತ್ತು ಕುಟುಂಬದ ಸದಸ್ಯರಿಗೆ ವೈದ್ಯಕೀಯ ಚಿಕಿತ್ಸೆಯನ್ನು ಉಚಿತವಾಗಿ ನೀಡುವ ಕುರಿತು ಸರ್ಕಾರದ ನಿಲುವೇನು; | ರಾಜ್ಯದ ಮೂರು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳ ನೌಕರರಿಗೆ ವೈದ್ಯಕೀಯ ಚಿಕಿತ್ಸೆಗೆ ಮುಂಗಡ ಮತ್ತು ವೆಚ್ಚದ ಮರುಪಾವತಿಯನ್ನು CGHS-2014 ದರದಲ್ಲಿ ನೀಡಲಾಗುತ್ತಿದೆ.<br><br>**ವಾ.ಕ.ರ.ಸಾ.ಸಂಸ್ಥೆ**<br>ವಾ.ಕ.ರ.ಸಾರಿಗೆ ಸಂಸ್ಥೆಯು ನೌಕರರು ಹಾಗೂ ಅವರ ಅವಲಂಬಿತರಿಗೆ ನಗದು ರಹಿತ ಚಿಕಿತ್ಸೆಯನ್ನು ಪಡೆಯಲು ಅನುಕೂಲವಾಗುವಂತೆ ಸಾರಿಗೆ ಸಂಜೀವಿನಿ ಯೋಜನೆಯನ್ನು ಮಾರ್ಚ್-2024 ರಿಂದ ಜಾರಿಗೊಳಿಸಲಾಗಿದೆ.<br><br>• ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ ಹುಬ್ಬಳ್ಳಿ<br>• ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ<br>• ಕಾರವಾರ ವೈದ್ಯಕೀಯ ವಿಜ್ಞಾನ ಸಂಸ್ಥೆ<br>• ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆ.<br><br>ಮೇಲ್ಕಂಡ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಅಲ್ಲಿ ದಾಖಲಾಗುವ ನೌಕರರು ಮತ್ತು ಅವೆರ ಅವಲಂಬಿತರಿಗೆ ನಗದು ರಹಿತ ಚಿಕಿತ್ಸೆ ಕೊಡಿಸಲು ವ್ಯವಸ್ಥೆ ಕಲ್ಪಿಸಲಾಗಿದೆ, ಅಲ್ಲಿ ಚಿಕಿತ್ಸೆ ಪಡೆದ ನೌಕರರ ವೆಚ್ಚವನ್ನು ಸಂಸ್ಥೆಯು ಭರಿಸುತ್ತಿದೆ. ಈ ಯೋಜನೆ ಜಾರಿಗೊಂಡಾಗಿನಿಂದ ಈ ವರೆಗೂ 169 ಪ್ರಕರಣಗಳಲ್ಲಿ ಸಂಸ್ಥೆಯ ನೌಕರರು ನಗದು ರಹಿತ ಚಿಕಿತ್ಸಾ ಸೌಲಭ್ಯವನ್ನು ಪಡೆದಿರುವರು.<br>ಕ.ರಾ.ರ.ಸಾ.ನಿಗಮದಲ್ಲಿ ನಗದುರಹಿತ ವೈದ್ಯಕೀಯ ಚಿಕಿತ್ಸಾ ಯೋಜನೆಯನ್ನು ಜಾರಿಗೆ ತರಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಉ | ಹೊಸ ಬಸ್ಸುಗಳ ಖರೀದಿ ಹಾಗೂ ಸಿಬ್ಬಂದಿ ನೇಮಕದ ಪ್ರಸ್ತಾವನೆ ಸರ್ಕಾರದ | ಹೌದು.<br>ಸಾರಿಗೆ ಸಂಸ್ಥೆಗಳಿಂದ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ವಾಹನಗಳನ್ನು ಖರೀದಿಸಿರುವುದಿಲ್ಲ. |

ಮುಂದಿದೆಯೇ?

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 07 ವರ್ಷಗಳಿಂದ ಮತ್ತು ಉಳಿದ ಸಾರಿಗೆ ಸಂಸ್ಥೆಗಳಲ್ಲಿ 2023-24ರ ಪೂರ್ವದ 04 ವರ್ಷಗಳಿಂದ ಸಿಬ್ಬಂದಿ ನೇಮಕಾತಿ ಆಗಿರುವುದಿಲ್ಲ.

2023-24 ಹಾಗೂ 2024-25ನೇ ಸಾಲಿನಲ್ಲಿ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಲ್ಲಿ ಖರೀದಿಸಲಾದ/ ಖರೀದಿಸಲಾಗುವ ಬಸ್‌ಗಳ ವಿವರ ಕೆಳಗಿನಂತಿರುತ್ತದೆ:

| **ಸಂಸ್ಥೆ** | **ಸೇರ್ಪಡೆಯಾದ ವಾಹನಗಳ ಸಂಖ್ಯೆ** | **ಸೇರ್ಪಡೆಗೊಳಿಸಲಾಗುತ್ತಿರುವ ವಾಹನಗಳ ಸಂಖ್ಯೆ** |
|---|---|---|
| ಕ.ರಾ.ರ.ಸಾ.ನಿಗಮ | 1118 | 20 |
| ಬೆಂ.ಮ.ಸಾ.ಸಂಸ್ಥೆ | 1510 | 699 |
| ವಾ.ಕ.ರ.ಸಾ.ಸಂಸ್ಥೆ | 662 | 554 |
| ಕ.ಕ.ರ.ಸಾ.ನಿಗಮ | 1014 | 73 |
| **ಒಟ್ಟು** | **4304** | **1346** |

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:**

ಪ್ರಸ್ತುತ 2000 ಚಾಲಕ-ಕಂ-ನಿರ್ವಾಹಕ ಹುದ್ದೆಯ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಲಾಗಿದೆ. ಅಲ್ಲದೇ, ಚಾಲಕ-ಕಂ-ನಿರ್ವಾಹಕ ಹುದ್ದೆಯು ಒಳಗೊಂಡಂತೆ ಇತರೆ 194 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.

**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ:**

ಸಂಸ್ಥೆಯಲ್ಲಿ ಕೋವಿಡ್ ನಂತದಲ್ಲಿ 2500 ನಿರ್ವಾಹಕ, ದರ್ಜೆ-3 ಹುದ್ದೆಯ ಮೂಲ ದಾಖಲಾತಿ ಪರಿಶೀಲನಾ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಅಲ್ಲದೇ, ಅನುಕಂಪದ ಆಧಾರದ ಮೇಲೆ ಚಾಲಕ / ನಿರ್ವಾಹಕರು ಒಳಗೊಂಡಂತೆ ಒಟ್ಟಾರೆಯಾಗಿ 306 ವಿವಿಧ ವೃಂದದ ಹುದ್ದೆಗಳಿಗೆ ನೇಮಕ ಮಾಡಲಾಗಿದೆ.

**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ:**

ಈಗಾಗಲೇ 2000 ಹುದ್ದೆಗಳನ್ನು ನೇರ ನೇಮಕಾತಿ

| | | |
|---|---|---|
| | | ಮೂಲಕ ಭರ್ತಿ ಮಾಡಿಕೊಳ್ಳಲು ಅನುಮೋದನೆ ನೀಡಲಾಗಿದ್ದು, ಅದರಂತೆ, 1000 ಚಾಲನಾ ಹುದ್ದೆಯ ಮೂಲ ದಾಖಲಾತಿಯ ಪರಿಶೀಲನಾ ಕಾರ್ಯ ಪೂರ್ಣಗೊಳಿಸಲಾಗಿದೆ. ಸದರಿ ನೇಮಕಾತಿ ಪ್ರಕ್ರಿಯೆ ಮುಕ್ತಾಯಗೊಂಡ ನಂತರ ಉಳಿದ 1000 ಚಾಲನಾ ಸಿಬ್ಬಂದಿಗಳ ನೇಮಕಾತಿಗಾಗಿ ಜಾಹಿರಾತು ಹೊರಡಿಸಲಾಗುವುದು. ಅಲ್ಲದೇ ಚಾಲಕ-ಕಂ-ನಿರ್ವಾಹಕ ಹುದ್ದೆಯು ಒಳಗೊಂಡಂತೆ ಇತರೆ ಒಟ್ಟು 391 ವಿವಿಧ ವೃಂದಗಳಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**<br><br>ಪ್ರಸ್ತುತ 1583 ಚಾಲಕ ಹಾಗೂ ಚಾಲಕ-ಕಂ-ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಹಾಗೂ ಇತರೆ 121 ವಿವಿಧ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. |

ಸಂಖ್ಯೆ: ಟಿಡಿ 214 ಟಿಸಿಕ್ಯೂ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು